**2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ**

**ಸತ್ರ ಮೊಕದ್ದಮೆ ಸಂಖ್ಯೆ: 106/2021**

**ಪಿ.ಡಬ್ಲುಃ 13 ಸಿಡಬ್ಲುಃ 19**

| | | |
|---|---|---|
| ಸಾಕ್ಷಿಯ ಹೆಸರು | : | ಬಸಪ್ಪ |
| ತಂದೆಯಹೆಸರು | : | ವಾಸಲಿಂಗಪ್ಪ |
| ವಯಸ್ಸು | : | **50** ವರ್ಷ |
| ವೃತ್ತಿ | : | ವ್ಯವಸಾಯ |
| ವಾಸಸ್ಥಳ | : | ನಿಟ್ಟರವಟ್ಟಿ ಗ್ರಾಮ |

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ **20-07-2024**

ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-

ನನಗೆ 1 ನೇ ಆರೋಪಿಯ ಪರಿಚಯ ಇದೆ. ಆರೋಪಿ 2 ಮತ್ತು 3 ರವರ ಪರಿಚಯ ಇಲ್ಲ. ನನಗೆ ಈ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಮನೆಯಲ್ಲಿ ಇಲ್ಲದ ಸಮಯದಲ್ಲಿ 1 ನೇ ಆರೋಪಿಯು ನಮ್ಮ ಮನೆಯ ಹತ್ತಿರ ಬಂದು ತನ್ನ ಮೋಟಾರ್ ಸೈಕಲ್ ನ್ನು ಬಿಟ್ಟು ಹೋಗಿದ್ದ ಎಂದು ನನ್ನ ಮಗಳು ತಿಳಿಸಿದ್ದಳು. ಆದಾದ 2-3 ದಿವಸಗಳ ನಂತರ ಪೊಲೀಸರು ನಮ್ಮ ಮನೆಗೆ ಬಂದು ಪೊಲೀಸರು ಪಂಚನಾಮೆ ಮಾಡಿ ನನ್ನ ಸಹಿ ಪಡೆದುಕೊಂಡು ಬೈಕ್ ತೆಗೆದುಕೊಂಡು ಹೋದರು. ಪೊಲೀಸರು ಬೈಕ್ ನ್ನು ಏಕೆ ತೆಗೆದುಕೊಂಡು ಹೋದರು ಎಂದು ನನಗೆ ಗೊತ್ತಿಲ್ಲ. ನಾನು ಪೊಲೀಸರ ಮುಂದೆ ಯಾವುದೆ ಹೇಳಿಕೆಯನ್ನು ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀಸವಾಲು ಮಾಡಲು ಸ ಅ ರವರು ಪರವಾನಿಗೆ ಕೇಳುತ್ತಾರೆ. ಸ ಅ ರವರ ವಾದವನ್ನು ಕೇಳಿ ಸಾಕ್ಷಿಯ ಹೇಳಿಕೆಯನ್ನು ಹಾಗೂ ಮುಖ್ಯ ವಿಚಾರಣೆಯನ್ನು ಪರಿಶೀಲನೆ ಮಾಡಿ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪರವಾನಿಗೆ ಕೊಡಲಾಯಿತು).

SC No.106/2021
PW- 13

<u>ಪಾಟೀಸವಾಲು ಮಾನ್ಯ ಸಾರ್ವಜನಿಕ ಅಭಿಯೋಜಕರಿಂದ:</u>

ದಿಃ **31-07-2021** ರಂದು ನಾನು ಈ ಪ್ರಕರಣದಲ್ಲಿ ನನಗೆ ಈಗ ಓದಿ ಹೇಳಿದಂತೆ ಪೊಲೀಸರ ಮುಂದೆ "ನಾನು ಮೇಲ್ಕಂಡ ವಿಳಾಸದಲ್ಲಿ --------- ಸುಳ್ಳು ಹೇಳಿರುವುದಾಗಿ ಗೊತ್ತಾಯಿತು " ಎಂದು ಹೇಳಿಕೆಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿದ ಹೇಳಿದ ಹೇಳಿಕೆಯನ್ನು ನಿಪಿ-23 ಎಂದು ಗುರುತಿಸಲಾಯಿತು. ನಿಪಿ-23 ರಂತೆ ಹೇಳಿಕೆ ಕೊಟ್ಟಿದ್ದರೂ ಸಹ ಮತ್ತು ನನಗೆ ಪ್ರಕರಣದ ಬಗ್ಗೆ ಮಾಹಿತಿ ಇದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀಸವಾಲು 1 ನೇ ಆರೋಪಿ ಪರಃ ಶ್ರೀ ವೈ ಕೆ ವಕೀಲರಿಂದಃ</u>

ನನಗೆ ಪೊಲೀಸರು ಮನೆಗೆ ಬಂದ ನಂತರ ಬೈಕ್ ಬಗ್ಗೆ ಗೊತ್ತಾಗಿತ್ತು. ಸದರಿ ವಾಹನ ಯಾರ ಹೆಸರಿನಲ್ಲಿ ಇತ್ತು ಎಂದು ಮತ್ತು ಅದರ ನೊಂದಣಿ ಸಂಖ್ಯೆನನಗೆ ಗೊತ್ತಿಲ್ಲ.

<u>ಪಾಟೀಸವಾಲು 2 ನೇ ಆರೋಪಿ ಪರಃ ಶ್ರೀ ವಕೀಲರಿಂದಃ</u>

ಬೈಕ್ ನ್ನು ಯಾರು ಯಾವಾಗ ನಮ್ಮ ಮನೆಯ ಮುಂದೆ ತಂದು ಬಿಟ್ಟಿದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಪೋಟೋ ತೆಗೆದಿಲ್ಲ. ನಾನು ಈಗ ನೋಡುತ್ತಿರುವ ಪೋಟೋದಲ್ಲಿ ನನ್ನ ಮನೆ ಕಾಣುವುದಿಲ್ಲ. ನನ್ನ ಮನೆಯ ಮುಂದೆ ಯಾರು ಸಹ ಬೈಕ್) ನ್ನು ಬಿಟ್ಟಿರಲಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲಲ. ಪೋಟೋದಲ್ಲಿ ಬೈಕ್ ಕಾಣಿಸುತ್ತಿರುವ ಸ್ಥಳ ಮೋಕಾ ಪೊಲೀಸ್ ಠಾಣೆಯ ಆವರಣ ಆಗಿದೆ ಎಂದರೆ ಸರಿಯಲ್ಲ.

(3 ನೇ ಆರೋಪಿ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅವಲಂಬಿಸಿದ್ದಾರೆ ).

ಮರುವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.